ಬರೆದ ಹಾಗೆ ಇಲ್ಲಿಗೆ ಹಿಂತಿರುಗಲು ಅವರ ಮನಸ್ಸು ಹಾತೊರೆಯುತ್ತಿತ್ತು. 1986ರಲ್ಲಿ ಭಾರತಕ್ಕೆ ಮರಳಿದೆವು. ಇಲ್ಲಿ ಅವರಿಗೆ ದೊಡ್ಡ ಸ್ನೇಹಬಳಗವೇ ಇತ್ತು. 'ಅನನ್ಯ' ಅಂತೊಂದು ಸಾಹಿತ್ಯ ವೇದಿಕೆ ರೂಪಿಸಿಕೊಂಡು ಪ್ರತಿ ತಿಂಗಳು ಏನಾದರೊಂದು ಸಾಹಿತ್ಯದ ಕಾರ್ಯಕ್ರಮ ಮಾಡುತ್ತಿದ್ದರು. ಒಂದಿಷ್ಟು ದಿನ ಮನೆಯಲ್ಲಿ, ಹೊರಗಡೆ ಸಾಹಿತ್ಯ ಕೂಟ, ಚರ್ಚೆಗಳನ್ನು ನಡೆಸುತ್ತಿದ್ದರು. ಸಮಾನ ಆಸಕ್ತರು ಒಟ್ಟಿಗೆ ಸೇರಿ ನಡೆಸುತ್ತಿದ್ದ ಆ ಕಾರ್ಯಕ್ರಮಗಳು ಚೆನ್ನಾಗಿದ್ದವು.

ಬೆಂಗಳೂರಿನ ಸ್ನೇಹ ಬಳಗದಲ್ಲಿ ಪಿ. ಲಂಕೇಶ್, ಡಿ.ಆರ್. ನಾಗರಾಜ್, ಶೂದ್ರ ಶ್ರೀನಿವಾಸ್, ಕಿ.ರಂ. ನಾಗರಾಜ ಇನ್ನೂ ಹಲವರು ಇದ್ದರು. ವಾರಕ್ಕೊಮ್ಮೆ ತಪ್ಪದೇ ಅವರನ್ನು ಭೇಟಿ ಮಾಡೋಕೆ ಹೋಗುತ್ತಿದ್ದರು. ಅವರೂ ಆಗೀಗ ಮನೆಗೆ ಬಂದು ಹೋಗುತ್ತಿದ್ದರು. ಅವರಿಗೆ ಬಹಳ ಪ್ರಿಯವಾಗಿದ್ದದ್ದು ಮೂರು 'ಕಾ ಕಾ ಕಾ...' ಕಾವ್ಯ, ಕಾರ್ಡ್ಸ್, ಕಾರು. ನಮ್ಮ ಕಾರು ವಿದೇಶದಿಂದ ತಂದದ್ದು. ಬಹಳ ಮುದ್ದಾಗಿದ್ದ ಕಾರು. ಅದನ್ನು ಓಡಿಸ್ತಿದ್ದರೆ ಒಳ್ಳೇ ಸಂಗೀತ ಇದ್ದ ಹಾಗಿರೋದು. ಕಾರ್ಡ್ಸ್ ಆಡುವುದೆಂದರೆ ಅವರಿಗೆ ಪಂಚಪ್ರಾಣ. ಬಹಳ ಒಳ್ಳೆಯ ಮಾತುಗಾರರು. ಮಾತಾಡಿದ್ದು ಕೇಳುವವರ ಮನಸ್ಸಿಗೆ ನಾಟುವಂತೆ ಹೇಳುತ್ತಿದ್ದರು. ಪದ್ಯಗಳನ್ನು ಬಹಳ ಸೊಗಸಾಗಿ ಓದುತ್ತಿದ್ದರು. ಅವರ ಧ್ವನಿ, ಆ ವಿರಿಳಿತ, ಆ ಭಂಗಿ ಬಹಳ ಚೆನ್ನಾಗಿತ್ತು. **The way he used to read it was perfect.**

## 'ಸಪ್ತಪದಿ' ಕವನ ಸಂಕಲನ

ಆ ಸಂಕಲನದ ಮೊದಲ ಪದ್ಯ ಹುಟ್ಟಿದ ಗಳಿಗೆಯ ಬಗ್ಗೆ ಅವರೇ ಬರೆದಿದ್ದಾರೆ. ಆ ಇಡೀ ಸಂಕಲನ ಮದುವೆ, ದಾಂಪತ್ಯ, ಸಂಬಂಧಗಳ ಕುರಿತೇ ಇದೆ. ಬೆಳದಿಂಗಳು ಅಂದ ತಕ್ಷಣ ಚಂದ್ರ, ಮಳೆ ಅಂದಾಕ್ಷಣ ಮೋಡ ಮನಸಿಗೆ ಹೊಳೆಯುವಂತೆ 'ಸಪ್ತಪದಿ' ಅಂದಾಕ್ಷಣ ಮದುವೆ ಅನ್ನೋದು ಹೊಳೆಯುತ್ತಲ್ಲ. ಹಾಗಾಗಿ, ನನಗೆ 'ಸಪ್ತಪದಿ' ಎನ್ನುವ ಹೆಸರು ಅದಕ್ಕೆ ಹೆಚ್ಚು ಒಪ್ಪುತ್ತದೆ ಅನ್ನಿಸಿತು.

ಆ ಸಂಕಲನದ ಕವಿತೆಗಳಲ್ಲಿ ಬರುವ ಪಿಚಕಾರಿ ಮರ ಈಗಲೂ ಇದೆ. ಆ ಮರಕ್ಕೆ ನೀರು ಹಾಕಿದ್ದು, ಅದನ್ನು ಅವರು ಗಮನಿಸಿ ಪದ್ಯ ಬರೆದಿರುವುದು ಖುಷಿಯ ವಿಷಯ. ನಾವು ಮಾಡಿದ ಕೆಲಸವನ್ನು ಗುರುತಿಸಿರುವರಲ್ಲ ಅನ್ನೋ ಸಂತೋಷ ಸಹಜ ಅಲ್ಲವೇ. ಆ ಪದ್ಯಗಳ ಭಾವನೆಗಳು ನನ್ನವೂ ಆಗಿದ್ದರಿಂದ ಅವು ನನಗೆ ಕನ್ನಡಿ ಹಿಡಿದಂತೆ ಕಾಣುತ್ತವೆ.

